# ಅಗ್ನಿಶಮನ ತರಬೇತಿ

## ಮನೋಗತ

‘ಒಂದು ಚಿಕ್ಕ ಕಿಡಿಯಿಂದ ಉದ್ಭವಿಸಿದ ಬೆಂಕಿಯು ಚಿಕ್ಕದಾಗಿಯೇ ಕೊನೆಗೊಳ್ಳುತ್ತದೆ ಎಂದೇನಿಲ್ಲ’ ಎಂಬ ಒಂದು ಆಂಗ್ಲ ನುಡಿಯಿದೆ. ಕೇವಲ ಈ ನುಡಿಯಿಂದ ಬೆಂಕಿಯ ದಾಹಕತೆ, ಸಂಹಾರಕತೆ ಅಥವಾ ಅದರ ಭೀಕರ ಪರಿಣಾಮದ ಗಾಂಭೀರ್ಯತೆ ಗಮನಕ್ಕೆ ಬರುವುದಿಲ್ಲ; ಬೆಂಕಿಯ ಪ್ರತ್ಯಕ್ಷ ಅನುಭವ ಪಡೆದವರಿಗೆ ಮಾತ್ರ ಅದರ ಕಲ್ಪನೆಯಿರುತ್ತದೆ. ‘ಬೆಂಕಿ’ಯು ದೈನಂದಿನ ಜೀವನದಲ್ಲಿನ ಒಂದು ಅತ್ಯಾವಶ್ಯಕ ಘಟಕವಾಗಿದ್ದರೂ, ಅದರ ಬಗೆಗಿನ ನಿಯಂತ್ರಿತ ಮತ್ತು ಅನಿಯಂತ್ರಿತ ಬೆಂಕಿ ಇವುಗಳ ನಡುವಿನ ಲಕ್ಷ್ಮಣರೇಖೆಯು ಬಹಳ ಮಹತ್ವದ್ದಾಗಿದೆ. ಸಾಮಾನ್ಯವಾಗಿ ಮನುಷ್ಯನು ಉಪಯೋಗಿಸುವ ಎಲ್ಲ ಬೆಂಕಿಗಳೂ ನಿಯಂತ್ರಿತವಾಗಿರುತ್ತವೆ; ಆದರೆ ಯಾವುದಾದರೊಂದು ಪ್ರಸಂಗದಲ್ಲಿ ಬೆಂಕಿ ನಿಯಂತ್ರಣದ ಲಕ್ಷ್ಮಣರೇಖೆಯನ್ನು ದಾಟಬಹುದು. ಹೀಗಾದರೆ ಅದಕ್ಕೇನು ಪರಿಹಾರೋಪಾಯಗಳನ್ನು ಮಾಡಬೇಕು ಎಂಬುದು ಆ ಬೆಂಕಿಯನ್ನು ಉಪಯೋಗಿಸುವವರಿಗೆ ಗೊತ್ತಿರುವುದು ಮಹತ್ವದ್ದಾಗಿರುತ್ತದೆ. ದೊಡ್ಡ ದೊಡ್ಡ ಕಾರ್ಖಾನೆ, ಸಾರಿಗೆ ಹಡಗು, ವಿಮಾನ ಇತ್ಯಾದಿಗಳಲ್ಲಿ ಅಗ್ನಿಶಮನದ ತರಬೇತಿಯನ್ನು ಕೊಡಲಾಗುತ್ತದೆ; ಆದರೆ ಖೇದವೆಂದರೆ ಸಾಮಾನ್ಯ ಮನುಷ್ಯ, ಹಾಗೆಯೇ ದಿನದಲ್ಲಿ ೫-೬ ಗಂಟೆ ಬೆಂಕಿಯ ಮೇಲೆ ಅಡುಗೆ ಮಾಡುವ ಗೃಹಿಣಿಯು ಬೆಂಕಿಯ ಶಾಸ್ತ್ರ ಮತ್ತು ಅಗ್ನಿಶಮನದ ಉಪಾಯಗಳ ಬಗ್ಗೆ ಸಂಪೂರ್ಣ ಅನಭಿಜ್ಞಳಾಗಿರುತ್ತಾಳೆ. ಈ ಅಜ್ಞಾನದಿಂದ ಅನೇಕ ಅಪಘಾತಗಳು ಘಟಿಸುತ್ತವೆ. ಬೆಂಕಿಯ ಶಾಸ್ತ್ರ, ಅಗ್ನಿಶಮನದ ವಿವಿಧ ಮಾಧ್ಯಮಗಳು ಮತ್ತು ಅವುಗಳನ್ನು ಉಪಯೋಗಿಸುವ ಪದ್ಧತಿ, ತಪ್ಪು ಮಾಧ್ಯಮಗಳನ್ನು ಉಪಯೋಗಿಸುವುದರಿಂದಾಗುವ ದುಷ್ಪರಿಣಾಮಗಳು ಇತ್ಯಾದಿಗಳ ಬಗ್ಗೆ ಶಾಸ್ತ್ರೀಯ ದೃಷ್ಟಿಯಿಂದ ಮತ್ತು ಸುಲಭ ಭಾಷೆಯಲ್ಲಿ ಜ್ಞಾನ ನೀಡುವುದು ಈ ಗ್ರಂಥದ ಮುಖ್ಯ ಉದ್ದೇಶವಾಗಿದೆ.

ಹಿಂದೂ ಧರ್ಮದಲ್ಲಿ ಪ್ರತಿಯೊಬ್ಬ ಮನುಷ್ಯನು, ದೇವಋಣ, ಪಿತೃಋಣ, ಋಷಿಋಣ ಮತ್ತು ಸಮಾಜಋಣ ಎಂಬ ನಾಲ್ಕು ಋಣಗಳನ್ನು ತೀರಿಸುವುದು ಅವನ ವಿಹಿತ ಕರ್ತವ್ಯವೆಂದು ಪರಿಗಣಿಸಲಾಗಿದೆ. ಪರಸ್ಪರ ಸಹಕಾರ ಮತ್ತು ಪರೋಪಕಾರದಿಂದ ಸಮಾಜಋಣವನ್ನು ತೀರಿಸಲು ಸಾಧ್ಯವಾಗುತ್ತದೆ. ಅಗ್ನಿಶಮನ ತರಬೇತಿಯ ಜ್ಞಾನವನ್ನು ಮೈಗೂಡಿಸಿಕೊಂಡು ಸಮಯ ಬಂದಾಗ ಅದನ್ನು ಸಮಾಜಕ್ಕಾಗಿ ಉಪಯೋಗಿಸಿ ಸಮಾಜಋಣವನ್ನು ತೀರಿಸಬಹುದು.

ಅಗ್ನಿಪ್ರಳಯದ ಆಪತ್ತಿನಿಂದ ರಾಷ್ಟ್ರದ ಜೀವಹಾನಿ ಮತ್ತು ವಿತ್ತಹಾನಿ ಈ ಎರಡೂ ವಿಧದ ಹಾನಿಗಳು ಬಹುದೊಡ್ಡ ಪ್ರಮಾಣದಲ್ಲಿ ಆಗುತ್ತಿರುತ್ತವೆ. ಈ ಹಾನಿಗಳನ್ನು ತಡೆಯಲು ಪ್ರಯತ್ನಿಸುವುದೆಂದರೆ ರಾಷ್ಟ್ರಹಿತ ಮತ್ತು ರಾಷ್ಟ್ರರಕ್ಷಣೆಯ ಕಾರ್ಯದಲ್ಲಿ ಸಹಭಾಗಿಯಾಗುವುದು. ರಾಷ್ಟ್ರದ ಆಯುಷ್ಯದಲ್ಲಿ ಸಮಷ್ಟಿಯ ಜೀವನ ಸೇರಿಕೊಂಡಿರುತ್ತದೆ; ಏಕೆಂದರೆ ರಾಷ್ಟ್ರ ಉಳಿದರೆ ಸಮಾಜ ಉಳಿಯುತ್ತದೆ ಮತ್ತು ಸಮಾಜ ಉಳಿದರೆ ವ್ಯಕ್ತಿ ಉಳಿಯುತ್ತಾನೆ. ವ್ಯಕ್ತಿ ಉಳಿದರೆ ಮಾತ್ರ ಸಾಧನೆಯನ್ನು ಮಾಡಬಲ್ಲನು. ಆದುದರಿಂದ

ಸ್ವಹಿತ ಮತ್ತು ರಾಷ್ಟ್ರರಕ್ಷಣೆಗಾಗಿ ‘ಅಗ್ನಿಶಮನ ತರಬೇತಿ’ ವಿಷಯದ ಮಹತ್ವವನ್ನು ಎಲ್ಲರೂ ತಿಳಿದುಕೊಳ್ಳುವುದು ಆವಶ್ಯಕವಾಗಿದೆ.

ಈ ಗ್ರಂಥದಲ್ಲಿರುವ ಜ್ಞಾನವನ್ನು ಓದಿ ಅಗ್ನಿಪ್ರಕೋಪದ ಆಪತ್ತುಗಳಿಂದ ತಮ್ಮನ್ನು, ಹಾಗೆಯೇ ಸಾಧನೆಯಿಂದು ಸಮಾಜ ಮತ್ತು ರಾಷ್ಟ್ರವನ್ನು ರಕ್ಷಿಸುವ ಕ್ಷಮತೆಯು ಪ್ರತಿಯೊಬ್ಬರಲ್ಲಿಯೂ ನಿರ್ಮಾಣವಾಗಲೆಂದು ಶ್ರೀಗುರುಚರಣಗಳಲ್ಲಿ ಪ್ರಾರ್ಥನೆ. - **ಸಂಕಲನಕಾರರು**

## ಸಮಾಜ ಮತ್ತು ರಾಷ್ಟ್ರದ ಹಿತಕ್ಕಾಗಿ ಪ್ರಥಮಚಿಕಿತ್ಸೆಯ ತಂತ್ರಗಳನ್ನು ಮೈಗೂಡಿಸಿಕೊಳ್ಳಿ !

ಯಾರಾದರೊಬ್ಬ ವ್ಯಕ್ತಿ ಆಕಸ್ಮಿಕ ಘಟನೆಯಿಂದ ಗಾಯಗೊಂಡರೆ ಅವನ ಪ್ರಾಣವನ್ನು ರಕ್ಷಿಸುವುದು ದೇಶದ ನಾಗರಿಕನ ಕರ್ತವ್ಯವಾಗಿದೆ. ಸಂಕಟದಲ್ಲಿ ಸಿಲುಕಿಕೊಂಡ ವ್ಯಕ್ತಿಯಲ್ಲಿ ಹಿತಕರ ಪರಿವರ್ತನೆ ಮಾಡುವ ಪ್ರಥಮಚಿಕಿತ್ಸೆಯ ತಂತ್ರಗಳೆಂದರೆ ಪ್ರಸ್ತುತ ಜಗತ್ತಿನಲ್ಲಿನ ಸಂಜೀವನಿಯೆಂದೇ ಹೇಳಬಹುದು. ಮುಂಬರುವ ಭೀಕರ ಕಾಲದಲ್ಲಿ, ವಿಶೇಷವಾಗಿ ಮೂರನೇ ಮಹಾಯುದ್ಧದ ಕಾಲದಲ್ಲಿ ರಾಷ್ಟ್ರದಲ್ಲಿನ ನಾಗರಿಕರಿಗೆ ಅನೇಕ ಆಪತ್ತುಗಳನ್ನು ಎದುರಿಸಬೇಕಾಗುವುದು. ಆದುದರಿಂದ ಪ್ರತಿಯೊಬ್ಬ ನಾಗರಿಕನು ಪ್ರಥಮಚಿಕಿತ್ಸೆಯ ತರಬೇತಿ ಪಡೆದು ಸಮಾಜ ಮತ್ತು ರಾಷ್ಟ್ರಹಿತಕ್ಕಾಗಿ ತತ್ಪರರಾಗಿರುವುದು ಕಾಲಾನುಸಾರ ಆವಶ್ಯಕವಾಗಿದೆ.


**ಕರ್ಮಬಂಧನದಿಂದ ಮುಕ್ತರಾಗಲು**
**ನಾಮದ ಮಹತ್ವ ತಿಳಿಸುವ ಸನಾತನದ ಗ್ರಂಥ !**

# ನಾಮಜಪದ ಮಹತ್ವ ಮತ್ತು ಲಾಭಗಳು

- ಭಗವಂತನ ರೂಪಕ್ಕಿಂತ ಅವನ ನಾಮವು ಏಕೆ ಮಹತ್ವದ್ದಾಗಿದೆ?
- ನಾಮವು ಸದಾಚಾರಿ ಮತ್ತು ದುರಾಚಾರಿ ಎಲ್ಲರಿಗೂ ಏಕೆ ತಾರಕವಾಗಿದೆ?
- ನಾಮಜಪದಿಂದ ಮೃತ್ಯುವಿನ ನಂತರವೂ ಹೇಗೆ ಲಾಭವಾಗುವುದು?
- ನಾಮಜಪ ಮಾಡುವುದರಿಂದ ಸಮಷ್ಟಿಗೆ ಆಗುವ ಲಾಭಗಳಾವುವು?
- ಇತರ ಯೋಗಮಾರ್ಗಗಳಿಗಿಂತ ನಾಮಜಪವು ಹೇಗೆ ಶ್ರೇಷ್ಠವಾಗಿದೆ?
- ಸಂಚಿತ ನಿರ್ಮಾಣವಾಗದಿರುವುದು, ಪ್ರಾರಬ್ಧದ ಮೇಲೆ ಜಯಗಳಿಸುವುದು ಮತ್ತು ಅಕರ್ಮಕರ್ಮವಾಗುವುದು ಇವುಗಳಿಗೆ ನಾಮಜಪವು ಹೇಗೆ ಸಹಾಯಕವಾಗುವುದು?

**ನಾಮಜಪದಿಂದ ನಾಮಿಯೊಂದಿಗೆ (ಈಶ್ವರನೊಂದಿಗೆ)**
**ಏಕರೂಪವಾಗುವುದೆಂದರೆ ‘ನಾಮಸಂಕೀರ್ತನಯೋಗ’ !**

## ಅನುಕ್ರಮಣಿಕೆ


卐 ಮುಂಬರುವ ಭೀಕರ ಆಪತ್ಕಾಲದಲ್ಲಿ ಸಂಜೀವಿನಿಯಾಗುವ ಸನಾತನದ ಗ್ರಂಥಮಾಲಿಕೆಯ ಸಂಕ್ಷಿಪ್ತ ಪರಿಚಯ ೭

卐 ಮನೋಗತ ೧೦

卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೧೨

೧. ಪ್ರಾಸ್ತಾವಿಕ / ಪೂರ್ವವಿವೇಚನೆ ೧೩

೨. ಬೆಂಕಿಯ ಶಾಸ್ತ್ರ ೧೪

೨ ಅ. ಬೆಂಕಿಯಿಂದ ಸಿಗುವ ಉಷ್ಣತೆಯ ಉಗಮ ೧೪

೨ ಆ. ಬೆಂಕಿಯ ಸಂದರ್ಭದಲ್ಲಿನ ವ್ಯಾಖ್ಯೆಗಳು ೧೫

೨ ಇ. ಬೆಂಕಿಯ ಘಟಕಗಳು ೧೬

೨ ಈ. ಬೆಂಕಿಯ ಹಂತಗಳು ೧೮

೨ ಉ. ಬೆಂಕಿ ತಗಲುವುದರ ಸಾಮಾನ್ಯ ಕಾರಣಗಳು ೧೮

೨ ಊ. ಬೆಂಕಿ ಹರಡುವುದರ ಕಾರಣಗಳು ೧೯

೨ ಎ. ಬೆಂಕಿಯ ವರ್ಗೀಕರಣ ೨೦

೩. ಅಗ್ನಿಶಮನ ೨೦

೩ ಅ. ಬೆಂಕಿಯನ್ನು ನೋಡಿದಾಗ ನೀವೇನು ಮಾಡುವಿರಿ ? ೨೨

೩ ಆ. ಬೆಂಕಿಯನ್ನು ಹುಡುಕುವ ಉಪಕರಣಗಳು ಮತ್ತು ಅವುಗಳ ಉಪಯೋಗ ೨೩

೩ ಇ. ಅಗ್ನಿಶಮನದ ಪದ್ಧತಿ ೨೫

೩ ಈ. ಅಗ್ನಿಶಮನದ ಮಾಧ್ಯಮಗಳು ೨೬

೪. ಅಗ್ನಿಶಮನ ಉಪಕರಣಗಳು ೨೯

೪ ಅ. ಶಾಶ್ವತ ಅಗ್ನಿಶಾಮಕಗಳು (ಫಿಕ್ಸ್ಡ್ ಫೈರ್ ಎಕ್ಸ್ಟಿಂಗ್‌ವಿಶರ್) ೨೯

೪ ಆ. ಸಾಗಿಸಬಲ್ಲ ಅಗ್ನಿಶಾಮಕ (ಪೋರ್ಟೆಬಲ್ ಫೈರ್ ಎಕ್ಸ್‌ಟಿಂಗ್ವಿಶರ್) ೩೦

೫. ಅಗ್ನಿಶಾಮಕ ದಳ ೪೧

೫ ಅ. ಅಗ್ನಿಶಾಮಕ ದಳದ ಯೋಧರ (ಫೈರ್‌ಮ್ಯಾನ್‌ನ) ಕರ್ತವ್ಯಗಳು ೪೪

೬. ಪ್ರಸಂಗ ಮತ್ತು ಪ್ರಾಸಂಗಿಕ ಪರಿಹಾರೋಪಾಯಗಳು ೪೫

೬ ಅ. ಪ್ರತಿಕೂಲ ಪ್ರಸಂಗದಲ್ಲಿ ಒಬ್ಬರೇ ಬೆಂಕಿಯನ್ನು ಆರಿಸಲು ಪ್ರಯತ್ನಿಸಬಾರದು ೪೫

೬ ಆ. ಬೆಂಕಿಯಿಂದ ಸುಡುತ್ತಿರುವ ಮನೆಯಿಂದ / ವಾಸ್ತುವಿನಿಂದ ಸ್ವಂತದ ಬಿಡುಗಡೆ ೪೫

೬ ಇ. ಬೆಂಕಿಯಿಂದ ಸುತ್ತುವರಿದಿದ್ದರೆ ಏನು ಮಾಡಬೇಕು ? ೪೬

೬ ಈ. ಎತ್ತರದ ಕಟ್ಟಡಕ್ಕೆ ಬೆಂಕಿ ತಗಲಿದರೆ ೬ ಉ. ತಮಗೆ ಬೆಂಕಿ ತಗಲಿದರೆ ೪೭

೬ ಊ. ಇತರರಿಗೆ ಬೆಂಕಿ ತಗಲಿದ್ದರೆ ೪೮

೬ ಎ. ಗೃಹೋಪಯೋಗಿ ಅನಿಲ ಸೋರಿದರೆ ಏನು ಮಾಡಬೇಕು ? ೪೮

೬ ಏ. ಸ್ಟವ್ ಉರಿದೆದ್ದರೆ ಅಥವಾ ಬಾಣಲೆಯ ಎಣ್ಣೆಗೆ ಬೆಂಕಿ ತಾಗಿದರೆ ಏನು ಮಾಡಬೇಕು ? ೪೮

೬ ಐ. ಬೆಂಕಿಯನ್ನು ಆರಿಸಲು ತಪ್ಪು ಮಾಧ್ಯಮಗಳನ್ನು ಉಪಯೋಗಿಸುವುದರಿಂದ ಘಟಿಸುವ ಅಪಘಾತಗಳು ೪೯

**೭. ಅಗ್ನಿಪ್ರತಿಬಂಧಕ ಪರಿಹಾರೋಪಾಯಗಳು ೫೧**

೭ ಅ. ಕಾರ್ಬನ್‌ಯುಕ್ತ ಘನರೂಪ ಇಂಧನ ೫೧

೭ ಆ. ದ್ರವರೂಪ / ವಾಯುರೂಪ ಇಂಧನ ೭ ಇ. ಲೋಹರೂಪ ಇಂಧನ ೫೨

೭ ಈ. ವಿದ್ಯುತ್ ಮತ್ತು ವಿದ್ಯುತ್ತಿನ ಉಪಕರಣಗಳಿಂದ ತಗಲುವ ಬೆಂಕಿ ೫೨

೭ ಉ. ಅಡುಗೆಕೋಣೆಯಲ್ಲಿನ ಬೆಂಕಿ ೫೩

೭ ಊ. ಪಟಾಕಿಗಳು ೫೬

೭ ಎ. ಬೆಂಕಿ ಮತ್ತು ಮಕ್ಕಳು ೫೭

೭ ಏ. ರಾಸಾಯನಿಕಗಳನ್ನು ಬಳಸುವಾಗ ವಹಿಸಬೇಕಾದ ಕಾಳಜಿ ೫೮

೭ ಐ. ದ್ರವರೂಪ ಅನಿಲದ ಸಿಲಿಂಡರನ್ನು ಉಪಯೋಗಿಸುವಾಗ ತೆಗೆದುಕೊಳ್ಳಬೇಕಾದ ಕಾಳಜಿ ೫೯

೭ ಒ. ಎತ್ತರದ ಕಟ್ಟಡಗಳಲ್ಲಿ ವಾಸಿಸುವವರಿಗೆ ೫೯

೭ ಓ. ಸಾಗಣೆಕೆ ಸುರಕ್ಷೆ ೬೦

೭ ಔ. ಸಾಮಾನ್ಯ ಸೂಚನೆ ೬೧

೭ ಅಂ. ಕೈಗಾರಿಕೆ ಸುರಕ್ಷತೆ ೬೨

೭ ಕ. ಆಪತ್ಕಾಲದಲ್ಲಿನ ಕೃತಿಗಳ ಆಯೋಜನೆ ೬೪

**೮. ಸುಟ್ಟ ಗಾಯಗಳು ಮತ್ತು ಪ್ರಥಮಚಿಕಿತ್ಸೆ ೬೫**

**೯. ಬೆಂಕಿಯ ಕೆಲವು ಪ್ರಸಿದ್ಧ ಘಟನೆಗಳ ವಿಶ್ಲೇಷಣಾತ್ಮಕ ಅಧ್ಯಯನ ೬೯**

**೧೦. ಆಧ್ಯಾತ್ಮಿಕ ಶಕ್ತಿಯಿಂದ ಅಗ್ನಿಪ್ರಕೋಪ ನಿಲ್ಲಿಸುವುದು ೭೩**

**೧೧. ‘ಅಗ್ನಿಶಮನ ತರಬೇತಿ’ ಸಂದರ್ಭದಲ್ಲಿ ಸನಾತನದ ಪ್ರಬೋಧನಾತ್ಮಕ ಕಾರ್ಯ ! ೭೫**